

ಅತ್ತ ಆಂಗ್ಲರೂ ಅಲ್ಲ ಇತ್ತ ಭಾರತೀಯರೂ ಅಲ್ಲ ಎಂಬಂಥ ಒಂದು ಅಂತರಪಿಶಾಚಿಯಾಗಿ ರೂಪು ಗೊಂಡಿದ್ದರು. ಸುತ್ತುಮುತ್ತಣ ಕೋಟ್ಯಂತರ ಜನಕ್ಕೂ ಈ ವಿದ್ಯಾವಂತರಿಗೂ ಯಾವ ಸಂಬಂಧವೂ ಇಲ್ಲ ಎಂಬ ಹಾಗೆ ತೋರುತ್ತಿತ್ತು. ಅವರಲ್ಲಿ ಅನೇಕರಿಗೆ ಜನಸಂಪರ್ಕವಿರಲಿಲ್ಲ. ನಮ್ಮ ಸಾಹಿತ್ಯದ ಸಾವಿರಾರು ವರ್ಷಗಳ ಸಂಪ್ರದಾಯದ ಅರಿವೂ ಇರಲಿಲ್ಲ. ಹಳ್ಳಿ ಬಾಳಿನ ಮಡುವಿನಲ್ಲಿ ಕೊಳೆಯುತ್ತಿದ್ದ ಲಾವಣಿಕಾರ, ಪ್ರಸಂಗಕರ್ತರೇ ಮುಂತಾದ ಜನಪದ ಸಾಹಿತಿಗಳಿಗೆ ನೂತನ ಜೀವನದ ಪೂರ್ವ ಪಶ್ಚಿಮಗಳ ಸಂಘಟನೆಯ ವಿಶಾಲ ಲೋಕಜ್ಞಾನವಿರಲಿಲ್ಲ, ನಾಡಿನ ವಾಣಿಯಾಗಬಲ್ಲ ಪ್ರತಿಭೆ ಅವರಲ್ಲಿ ಜಾಗೃತವಾಗಿರಲಿಲ್ಲ, ಆಗುವುದು ಸಾಧ್ಯವೂ ಇರಲಿಲ್ಲ. ಅಂಥ ಕಾಲದಲ್ಲಿ ಇಂಗ್ಲಿಷ್ ಬಲ್ಲವರು ಬರೆದ ಕವಿತೆ ಭಾವದಲ್ಲಾಗಲೀ, ಭಾಷೆಯಲ್ಲಾಗಲೀ ಕನ್ನಡ ಜನ ಇದು ತನ್ನದು ಎಂಬಂತೆ ಇರಲಿಲ್ಲ. ಇದು ತಮ್ಮ ಭಾಷೆಯಲ್ಲಿ ಬರೆದದ್ದು ಎಂದು ಕೂಡಾ ಅವರಿಗೆ ಅನಿಸುವಂತಿರಲಿಲ್ಲ. ಉತ್ತಮ ಕಾವ್ಯದ ಸಮಗ್ರವಾದ ಅರ್ಥ ಜನಸಾಮಾನ್ಯರಿಗೆ ಏಕೆ, ವಿದ್ಯಾವಂತರಿಗೂ ಕೂಡಾ ಸುಲಭವಾಗಿ ಆಗುತ್ತಿಲ್ಲ ಎಂಬ ಮಾತು ನಿಜ. ಆದರೆ ಕೇಳಿದ ತತ್‌ಕ್ಷಣ ಇದು ತಮ್ಮದು ಎಂದೆನಿಸಿ ಅದರ ಪ್ರಭಾವವನ್ನು ಜನ ಅರಿಯುವಂತೆ ಮಾಡದ ಕಾವ್ಯ ಉತ್ತಮ ಕಾವ್ಯ ಎನ್ನಲು ಆಗುವುದಿಲ್ಲ. ಹೊಸ ಹುಟ್ಟು ಬರುವಾಗಲಂತೂ ಕಾವ್ಯ ಹೀಗೆ ಅಂತರ ಪಿಶಾಚಿಯಾಗಿ ಎಂದೂ ಬರುವುದಿಲ್ಲ, ಅದು ನೆಲದ ವಾಣಿಯಾಗಿ ಬರುತ್ತದೆ. ಇಡೀ ಕನ್ನಡನಾಡೇ ಇದು ತನ್ನ ಕಾವ್ಯ ಎಂದು ಹೇಳಲಾಗುವಂತೆ ಅದು ಪುಟಯುತ್ತದೆ. ಅಂಥ ಕಾವ್ಯವನ್ನು ಹಾಡುವ ಕವಿ ಜನ ಜೀವನವನ್ನು ಆಮೂಲಾಗ್ರ ವ್ಯಾಪಿಸಿ ಇನ್ನೂ ಹತ್ತು ಅಂಗುಲ ಮೇಲಕ್ಕೇರಿ ನಿಲ್ಲುತ್ತಾನೆ. ಹೊಸಜೀವನದ ಈ ಹೊಸಗನ್ನಡ ಕಾವ್ಯದ ಮೂಲವನ್ನು ಶ್ರೀ ಬೇಂದ್ರೆಯವರು ಕರ್ಣಾಟಕದ ಜಾನಪದಗೀತೆಗಳಲ್ಲಿ, ಲಾವಣಿಗಳಲ್ಲಿ, ಶಿವಶರಣರ ವಚನಗಳಲ್ಲಿ, ಹರಿದಾಸರ ಪದಕೀರ್ತನಗಳಲ್ಲಿ ಕಂಡುಕೊಂಡರು. ಅಥವಾ ಅವರ ಯುಗಪ್ರವರ್ತಕ ಪ್ರತಿಭೆ ಅಲ್ಲಿ ತನ್ನ ಮತ್ತು ನೂತನ ಕಾವ್ಯದ ಮೂಲವಾಹನವನ್ನು ಹುಡುಕಿ ಪಡೆಯಿತು. ಜನಜೀವನದ ನೆಲದಲ್ಲಿ ನಿಂತು ಅವರು ತಾರೆಗಳನ್ನು ಹುಡುಕಿದರು. ಜನಪದ ಗೀತದ ಸ್ಥಾಯಿಯಲ್ಲಿ ಜೀವನದ ವೈವಿಧ್ಯವನ್ನು ಹಾಡಿದರು. ಇಂಗ್ಲಿಷ್, ಸಂಸ್ಕೃತ, ಕನ್ನಡ ಭಾಷಾ ಸಾಹಿತ್ಯಗಳ ಸಾರಗ್ರಹಣದಿಂದ ಸುಸಂಸ್ಕೃತವಾದ ಈ ಕವಿಯ ಮನಸ್ಸಿನ ರಸವಾಣಿ ಜನಜೀವನದ ನಾಳಗಳಲ್ಲಿ ಇಳಿದು ಹೊಸಬಾಳಿನ ಇನಿಜೇನಾಗಿ ಜಿನುಗಿತು. ಹೀಗೆ ನಾಡಿನ ವಾಣಿಯಾದಾಗ ಭಾಷೆ ಗ್ರಾಮ್ಯವಾಯಿತು. ಮಾತಿನ ರೀತಿ ಲಾವಣಿಕಾರರ ಗತ್ತನ್ನು ಹಿಡಿಯಿತು. ಆದರೆ ರಸ ಹೀಗೆ ಹರಿದಾಗ, ಆ ರಸಕ್ಕೆ ಈ ರೂಪ ಸಹಜವಾಗಿ ಬಂದಾಗ ಭಾಷೆ, ವ್ಯಾಕರಣ ಇತ್ಯಾದಿ ಹೇಗಿದ್ದರೆ ತಾನೆ ಏನು? 'ಪಾದ ಪದ್ಧತಿಯಲ್ಲಿ ಪದ ಕೂಡಿ ಬರುವಾಗ, ಯಾರಾರೆ ಗುರುಲಘು ಎಣಿಸುವರೆ?' ಇಂಥ ಕವಿತೆಗಳಲ್ಲಿ ಕಂಡು ಬರುವುದು ನಯದ ನಾಜೂಕಿನ ಕುಶಲ ಶಿಲ್ಪವಲ್ಲ, ಬೆಟ್ಟ ಹೊಳೆಗಳ, ಪ್ರವಾಹ ಜಲಪಾತಗಳ, ಶ್ರಾವಣ ಶರತ್ಕಾಲಗಳ, ಹೂವು ಹಸುರುಗಳ, ಪ್ರಕೃತಿ ವಿದ್ಯಮಾನಗಳ ಸಹಜ ಸೌಂದರ್ಯ. ಇಲ್ಲಿ ಕಂಡು ಬರುವುದು ಕೃತಕ ಜೀವನದ ನಯನವುರಲ್ಲ, ನಿಜ ಜೀವನದ ಬಿಸಿ ಕಸುವು, ಹಾಗೆ ನಿಜಜೀವನದ ಬಿಸಿನುಡಿಯಾದ್ದರಿಂದಲೇ ಇಲ್ಲಿನ ಭಾಷೆ ಕನ್ನಡ ನಾಡಿನ ಜೀವಂತ ಭಾಷೆಯಾಯಿತು, ಜೀವಾಳದ ನುಡಿಯಾಯಿತು. ಜನಜೀವನದ ತಿರುಳುಗನ್ನಡದ